ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೧೦ನೇ ಮೇ ೧೯೮೮, ವೈಶಾಖ ೨೧, ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಸಂದರ್ಶನ

೧೧೭೮. ಶ್ರೀ ಕೆ. ಹೆಚ್. ಪಾಟೀಲ್ (ಗದಗ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫ರಲ್ಲಿ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ೧೯೮೭ರ ಪೂರ್ವದಲ್ಲಿ ಸಂದರ್ಶನ ನಡೆಸಿದ್ದು ನಿಜವೆ?

ಆ) ಅವ್ಯವಹಾರ ನಡೆದಿದ್ದರಿಂದ ಸಂದರ್ಶನಗಳನ್ನು ಮುಂದ್ದಲ್ಲಿಯೇ ನಿಲ್ಲಿಸಿದ್ದು ನಿಜವೆ?

ಇ) ಆಯ್ಕೆಗಾಗಿ ಹೊಸ ವಿಧಾನವನ್ನು ಹಾಕಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಹೊಸ ವಿಧಾನದನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸರ್ಕಾರಕ್ಕಿರುವ ತೊಂದರೆಯೇನು?

ಈ) ನೇಮಕಾತಿ ನಿಧಾನವಾಗುತ್ತಿರುವುದರಿಂದಾಗಿ, ವಯೋಮಿತಿ ಹೆಚ್ಚಾಗಿರುವ ಅಭ್ಯರ್ಥಿಗಳಿಗೆ ಸರ್ಕಾರವು ನೀಡುವ ಪರಿಹಾರವೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆಗಳಿಗೆ ಅಭ್ಯರ್ಥಿಗಳ ಸಂದರ್ಶನವನ್ನು ೧೯೮೬ ಮತ್ತು ೧೯೮೭ರಲ್ಲಿ ನಡೆಸಲಾಯಿತು.

ಆ) ನೇಮಕಾತಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಬಂದ ಭ್ರಷ್ಟಾಚಾರದ ದೂರುಗಳಿಂದಾಗಿ ಸಂದರ್ಶನಗಳನ್ನು ನಿಲ್ಲಿಸಲಾಯಿತು.

ಇ) ಹೌದು, ಹೊಸ ವಿಧಾನದನ್ವಯ.

(i) ಶೀಘ್ರಲಿಪಿಗಾರರ ಹುದ್ದೆಗೆ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

(ii) ಬೆರಳಚ್ಚುಗಾರರ ಹುದ್ದೆಗೆ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಈ) ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಗರಿಷ್ಠ ವಯೋಮಿತಿಯೊಳಗಿದ್ದಲ್ಲಿ ಅವರನ್ನು ವಯೋಮಿತಿ ಮೀರಿದವರೆಂದು ಪರಿಗಣಿಸಲಾಗುವುದಿಲ್ಲ.

ಶ್ರೀ ಕೆ.ಎಚ್. ಪಾಟೀಲ್.— ಸಂತೋಷ, ಸೂಕ್ತ ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಒಂದು ಮಾತು. ನೇಮಕಾತಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಭ್ರಷ್ಟಾಚಾರದ ಆರೋಪ ಬಂದಿದೆ ಎಂದು ಹೇಳಿದ್ದೀರಿ. ಇಂತಹ ಭ್ರಷ್ಟಾಚಾರವನ್ನು ತೊಡೆದುಹಾಕುವುದಕ್ಕೆ ಹಾಗೂ ಶಿಕ್ಷೆ ಮಾಡುವುದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ರಾಮಕೃಷ್ಣ ಹೆಗ್ಡೆ.— ಈ ಬಗ್ಗೆ ನನಗೆ ದೂರು ಬಂದ ತಕ್ಷಣವೇ ನಾನು ಆ ಸಮಿತಿಯನ್ನು ರದ್ದು ಪಡಿಸಿರುವುದೇ ಮೊದಲ ಕ್ರಮ. ಆ ನಂತರ ಭ್ರಷ್ಟಾಚಾರದ ಬಗ್ಗೆ ಬಂದ ಆ ದೂರುಗಳನ್ನು ಉಪಲೋಕಾಯುಕ್ತಕ್ಕೆ ತನಿಖೆಗಾಗಿ ಕಳುಹಿಸಿಕೊಟ್ಟಿದ್ದೇನೆ. ಇದು ಒಂದೇ ಕಮಿಟಿ ಅಲ್ಲ. ಇನ್ನೂ ಎರಡು-ಮೂರು ನೇಮಕಾತಿ ಕಮಿಟಿ ಸದಸ್ಯರ ವಿರುದ್ಧ ದೂರುಗಳು ಬಂದಿತ್ತು. ಅವಕ್ಕೂ ಇದೇ ರೀತಿಯ ಗಮನ ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಎಚ್. ಪಾಟೀಲ್ — ಯೋಗ್ಯವಾದ ಕ್ರಮ ಆದು. ಯೋಗ್ಯವಾದ ಮಾರ್ಗ ಆದು. ಜೊತೆಗೆ ಇಂತಹ ಭ್ರಷ್ಟಾಚಾರಿಗಳು ಇದ್ದಾರೆಂದು ಸಾರ್ವಜನಿಕರಿಗೆ ಗೊತ್ತಾಗುವುದಕ್ಕಾಗಿ ಇವರುಗಳ ಹೆಸರನ್ನು ಪ್ರಕಟಿಸುವುದಕ್ಕೆ ಇಚ್ಛಿಪಡುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಡೆ.— ಈ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ಹೆಸರುಗಳು ಮೊದಲೇ ಪ್ರಕಟವಾಗಿವೆ.

ಶ್ರೀ ಕೆ.ಎಚ್. ಪಾಟೀಲ್.— ಯಾರ ಮೇಲೆ ಆರೋಪ ಬಂದಿದೆ ಅವರ ಹೆಸರುಗಳನ್ನು ಪ್ರಕಟ ಪಡಿಸುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಡೆ.— ಉಪಲೋಕಾಯುಕ್ತದಿಂದ ತೀರ್ಮಾನ ಬಂದಮೇಲೆ ಇವರುಗಳ ಹೆಸರುಗಳನ್ನು ಪ್ರಕಟಣೆ ಮಾಡುವುದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ.

ಆರಕ್ಷಕ ಕಛೇರಿಯಲ್ಲಿ ವಿವಾಹ ನಡೆಯುತ್ತಿರುವುದು

೧೩೮೧. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಕ್ಷಕ ಠಾಣೆಯಲ್ಲಿ ಹಾಗೂ ಆರಕ್ಷಕ ಕಛೇರಿಯಲ್ಲಿ ವಿವಾಹ ಮಾಡಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸಬ್ ರಿಜಿಸ್ಟ್ರಾರ್ ಕಛೇರಿ ಇದ್ದು ಕೂಡ ಈ ರೀತಿ ಮಾಡಿಸುವುದು ಕಾನೂನು ಬಾಹಿರ ವಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ)ವಧುವರರ ತಂದೆ-ತಾಯಿಗಳು ಅಥವಾ ಹಿರಿಯರು ಅಡ್ಡಿ ಪಡಿಸಿದ ವಿಶೇಷ ಪ್ರಕರಣಗಳಲ್ಲಿ ಅವರು ಪೊಲೀಸ್ ಠಾಣೆಯ ಆವರಣದ ಹೊ ಪೂಲೆ ಬದಲಾಯಿಸಿಕೊಳ್ಳಲು ಪೊಲೀಸರು ರಕ್ಷಣೆ ಕೊಡುತ್ತಾರೆ.

ಆ) ಮದುವೆಯನ್ನು ನೊಂದಾಯಿಸಿಕೊಳ್ಳುವುದು ಸಬ್ ರಿಜಿಸ್ಟ್ರಾರ್‌ರವರ ಕಛೇರಿಯ ಕೆಲಸ ವಾದುದರಿಂದ ಪೊಲೀಸರು ಇದನ್ನು ನೋಂದಾಯಿಸಿಕೊಳ್ಳುವುದಿಲ್ಲ.

ಶ್ರೀ ಐ. ಬಿ. ಶಂಕರ್.—ಅಧ್ಯಕ್ಷರೇ, ಈ ಪ್ರಶ್ನೆ ಕೇಳಿದ ಉದ್ದೇಶವೆಂದರೆ, ಕೆಲವರು ಬೇರೆ ಬೇರೆ ಜಿಲ್ಲೆಗಳಿಂದ ನಮ್ಮ ಜಿಲ್ಲೆಗೆ ಬಂದು ಪೋಲೀಸ್ ಠಾಣೆಯಲ್ಲಿ ಈ ರೀತಿ ಮದುವೆ ಆಗಿದ್ದಾರೆ. ಇಂತಹ ದಂಪತಿಗಳು ನಾಳೆ ಸುಖ ಜೀವನ ನಡೆಸಿದರೆ ಸಂತೋಷ. ಆದರೆ ಇಂತಹ ಮದುವೆಗಳಲ್ಲಿ ಯಾವುದೇ ರೀತಿಯ ದಾಖಲೆಗಳು ಇರುವುದಿಲ್ಲ. ಬೇರೆ ಜಿಲ್ಲೆಯಿಂದ ಬಂದು ಈ ರೀತಿ ಮದುವೆ ಆದಂತಹ ವ್ಯಕ್ತಿ ಹೆಣ್ಣನ್ನು ಬಿಟ್ಟರೆ ಕಾನೂನಿಗೆ ಒಳಪಟ್ಟಂತ ಆತನ ಮೇಲೆ ಕ್ರಮ ತೆಗೆದುಕೊಳ್ಳಲು ಯಾವುದೇ ರೀತಿಯ ಕಾಗದಪತ್ರಗಳು ಇರುವುದಿಲ್ಲ. ಆದ್ದರಿಂದ ಇಂತಹ ಸಂದರ್ಭದಲ್ಲಿ ಮದುವೆ ಆದ ನಂತರ ಅವರನ್ನು ಸಬ್-ರಿಜಿಸ್ಟ್ರರ್ ಕಛೇರಿಗೆ ಕಳುಹಿಸಿ ಅಲ್ಲಿ ಇವರ ಹೆಸರನ್ನು ನೋಂದಾಯಿಸತಕ್ಕ ಕಾನೂನು ತರ ಬೇಕಾಗುತ್ತದೆ. ಇದರಿಂದ ಕಾನೂನು ಬದ್ಧವಾಗಿ ಇವರು ದಂಪತಿಗಳು ಆಗುತ್ತಾರೆ. ಇನ್ನೊಂದು ವಿಷಯ ಹೇಳಬೇಕೆಂದರೆ, ಕೆಲವು ಕಡೆ ಪೋಲೀಸರೇ ಫೋರ್ಸ್‌ನಿಂದ ಇಂತಹ ಮದುವೆ ಮಾಡಿಸಬಹುದು ಅಥವಾ ನಾಲ್ಕೈದು ಜನ ಒತ್ತಾಯದಿಂದ ಠಾಣೆಗೆ ಇವರನ್ನು ತಂದು ಮದುವೆ ಮಾಡಿಸಬಹುದು. ತಂದೆ ತಾಯಿಗಳಿಗೆ ವಿರುದ್ಧವಾಗಿ ಆದ ಇಂತಹ ಮದುವೆಗಳಲ್ಲಿ ನಾಳೆ ದಿವಸ ಆ ಹೆಣ್ಣನ್ನು ಬಿಟ್ಟಾಗ